RNU AIR DHARWAD

NOVEMBER 29, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಬೆಳಗಾವಿ, ವಿಧಾನ ಮಂಡಲ ಚಳಿಗಾಲದ ಅಧಿವೇಶನ, ಡಿಸೆಂಬರ್ 20ರ ಬದಲು 19ಕ್ಕೆ, ಅನಿರ್ಧಿಷ್ಟಾವಧಿ ಮುಂದೂಡಿಕೆ – ಯು.ಟಿ. ಖಾದರ್.
- ರಾಷ್ಟ್ರದಲ್ಲೇ ಮೊದಲ, ಕೊಯ್ಲೋತ್ತರ 'ಸೆಕೆಂಡರಿ ಕೃಷಿ ನಿರ್ದೇಶನಾಲಯ' ರಾಜ್ಯದಲ್ಲಿ ಕಾರ್ಯಾರಂಭ – ಎಸ್.ವಿ. ಸುರೇಶ.
- ಸತ್ಯದ ಸಂಶೋಧನೆಗೆ ಆದ್ಯತೆ ನೀಡಿದ್ದ ದಾರ್ಶನಿಕ, ಎಂ.ಎಂ. ಕಲಬುರಗಿ –ನಾಡೋಜ, ಗೊ.ರು.ಚನ್ನಬಸಪ್ಪ.
- ಅಂತರ್ ವಿಶ್ವವಿದ್ಯಾಲಯಗಳ, ಮಹಿಳಾ ಬ್ಯಾಡ್ಮಿಂಟನ್ ಪಂದ್ಯಾವಳಿ; ಎಸ್.ಆರ್.ಎಂ. ಇನ್ಸ್ಟಿಟ್ಯೂಟ್, ಚೆನ್ನೈ, ತಂಡ, ವೀರಾಗ್ರಣಿ.

<><><>

ಈಗ ವಾರ್ತೆಗಳ ವಿವರ

<><><>

ಡಿಸೆಂಬರ್ 20 ರಿಂದ, ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿತವಾಗಿರುವ ಹಿನ್ನೆಲೆ, ವಿಧಾನ ಮಂಡಲ ಚಳಿಗಾಲದ ಅಧಿವೇಶನವನ್ನು, 19ನೇ ತಾರೀಖಿನ ಕಲಾಪದ ಬಳಿಕ, ಅನಿರ್ಧಿಷ್ಟಾವಧಿಗೆ ಮುಂದೂಡಲಾಗುವುದು ಎಂದು, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಡಿಸೆಂಬರ್ 9 ರಿಂದ 19ರ ವರೆಗೆ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆಯಲಿದೆ. ಪೂರ್ವ ನಿಗದಿತವಾಗಿದ್ದ, 20ನೇ ತಾರೀಖಿನ ಕಲಾಪವನ್ನು ಮೊಟಕುಗೊಳಿಸಲು ನಿರ್ಧರಿಸಲಾಗಿದೆ ಎಂದು, ಹೇಳಿದರು. ಬೆಳಗಾವಿ ಅಧಿವೇಶನದಲ್ಲಿ ಉತ್ತರಕರ್ನಾಟಕ ಭಾಗದ ಜನತೆಯ ಹಿತದೃಷ್ಟಿಯಿಂದ ಚರ್ಚೆ, ಕಲಾಪಗಳಿಗೆ ವಿಶೇಷ ಒತ್ತು ನೀಡಲಾಗುವುದು ಎಂದು, ಯು.ಟಿ. ಖಾದರ್ ಸ್ಪಷ್ಟ ಪಡಿಸಿದರು.

<><><>

ಗ್ರಾಮೀಣ ಭಾಗದ ಆಯ್ದ ಸರ್ಕಾರಿ ಶಾಲೆಗಳನ್ನು, ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಪರಿವರ್ತಿಸಿ, ಅಭಿವೃದ್ಧಿಪಡಿಸಲು, ಏಷ್ಯಾ ಅಭಿವೃದ್ಧಿ ಬ್ಯಾಂಕ್ ನಿಂದ ಎರಡು ಸಾವಿರ ಕೋಟಿ ರೂಪಾಯಿ ಸಾಲ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆ, ಈ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿದೆ.

ಎ.ಡಿ.ಬಿ. ಬಾಹ್ಯ ನಿಧಿ ಸಹಯೋಗದೊಂದಿಗೆ, ಎರಡು ಸಾವಿರ ಕೋಟಿ ರೂಪಾಯಿ, ರಾಜ್ಯ ಸರ್ಕಾರದಿಂದ 500 ಕೋಟಿ ರೂಪಾಯಿ ಅನುದಾನದೊಂದಿಗೆ, ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ ಎಂದು, ಸಭೆಯ ಬಳಿಕ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

<><><>

ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, 2024–25ನೇ ಸಾಲಿನ, ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ವಿನ್ಯಾಸದಲ್ಲಿ, ಯಾವುದೇ ಬದಲಾವಣೆ ಮಾಡಿಲ್ಲ ಎಂದು, ಸ್ಪಷ್ಟನೆ ನೀಡಿದೆ. ಮುಂಬರುವ ಶೈಕ್ಷಣಿಕ ವರ್ಷದಲ್ಲಿ, ವಿಷಯ ತಜ್ಞರ ಸಮಿತಿ ರಚಿಸಿ, ಸಮಿತಿ ವರದಿ ಆಧರಿಸಿ, ಕ್ರಮವಹಿಸಲಾಗುವುದು. ಸದ್ಯದಲ್ಲೇ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಮಂಡಳಿಯ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಈ ಬಗ್ಗೆ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಯಾವುದೇ ಗೊಂದಲಕ್ಕೆ ಒಳಗಾಗಬಾರದು ಎಂದು ಕೋರಲಾಗಿದೆ.

<><><>

ರಾಷ್ಟ್ರದಲ್ಲೇ ಮೊದಲ ಬಾರಿಗೆ, ಕರ್ನಾಟಕ, 'ಸೆಕೆಂಡರಿ ಕೃಷಿ ನಿರ್ದೇಶನಾಲಯ' ಆರಂಭಿಸಿ, ಕೊಯ್ಲೋತ್ತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ, ಇತರೆ ರಾಜ್ಯಗಳಿಗೆ ಮಾದರಿಯಾಗಿದೆ ಎಂದು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಎಸ್.ವಿ. ಸುರೇಶ ತಿಳಿಸಿದ್ದಾರೆ. ಮಂಡ್ಯದ ವಿಶ್ವೇಶ್ವರಾಯ ಕೆನಾಲ್ ಫಾರ್ಮ್ ಆವರಣದಲ್ಲಿ, ಮಂಡ್ಯ ಕೃಷಿ ಮೇಳವನ್ನು ಉದ್ಘಾಟಿಸಿ, ಅವರು, ಮಾತನಾಡಿದರು.  ಕೃಷಿಕರು ಸಮಗ್ರ ಕೃಷಿಗೆ ಒತ್ತು ನೀಡಬೇಕು. ರೈತರು ಸ್ವತಃ ಉದ್ಯಮಿಗಳಾಗಿ, ತಮ್ಮ ಬೆಳೆಗಳ ಸಂಸ್ಕರಣೆ, ಮೌಲ್ಯವರ್ಧನೆ, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆಗೆ ತಲುಪಿಸಲುವ ವ್ಯವಸ್ಥೆ ಮಾಡಿದಾಗ, ಅಧಿಕ ಲಾಭ ಗಳಿಸಲು ಸಾಧ್ಯ, ಎಂದರು.

<><><>

ಕೃಷಿಯಲ್ಲಿ ಡಿಜಿಟಲ್ ತಾಂತ್ರಿಕತೆಗಳ ಬಳಕೆ ಹಾಗೂ ಸಂಬಂಧಿತ ಸ್ಟಾರ್ಟ್‌ಅಪ್‌ಗಳಿಗೆ, ಕೃಷಿ ಮೇಳದಲ್ಲಿ ಒತ್ತು ನೀಡಲಾಗಿದೆ.

<><><>

ಅರುಣಾಚಾಲಪ್ರದೇಶ ರಾಜ್ಯದ ಕೃಷಿ ಹಾಗೂ ತೋಟಗಾರಿಕೆ ಖಾತೆ ಸಚಿವ ಗಾಬ್ರಿಲೆವಾಂಗ್‌ಚು ಅವರು, ಉನ್ನತಾಧಿಕಾರಿಗಳ ತಂಡದ ಜೊತೆ, ಇಂದು, ಉತ್ತರಕನ್ನಡ ಜಿಲ್ಲೆಯ ಶಿರಸಿಗೆ ಆಗಮಿಸಿ, ಮಲೆನಾಡಿನ ಅಡಕೆ ತೋಟಗಳನ್ನು ವೀಕ್ಷಿಸಲಿದ್ದಾರೆ. ಅಡಕೆ, ಸಂಬಾರ ಬೆಳೆಗಳು, ಸಾಂಪ್ರದಾಯಿಕ ಕೃಷಿ ವೈವಿಧ್ಯ, ಮಲೆನಾಡಿನ ಸುಸ್ಥಿರ ಅಭಿವೃದ್ಧಿ ಪ್ರಯೋಗಗಳ ಬಗ್ಗೆ, ರೈತರ ಜೊತೆ ಸಂವಾದ ನಡೆಸಲಿದ್ದಾರೆ.

<><><>

ಕಡಿಮೆ ವೆಚ್ಚದ ಕೃಷಿ ಮತ್ತು ರೈತರಿಗೆ ಖಚಿತ ಆದಾಯ ಕೊಡಬಲ್ಲ ಬಾಳೆ ಬೆಳೆಯನ್ನು, ಚಿಕ್ಕ ಜಾಗದಲ್ಲೂ ಅಳವಡಿಸಿಕೊಳ್ಳಬಹುದು ಎಂದು, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ತೋಟಗಾರಿಕೆ ವಿಭಾಗದ ಹಿರಿಯ ವಿಜ್ಞಾನಿ, ರಾಮಕೃ ್ಣ ಹೆಗಡೆ ತಿಳಿಸಿದ್ದಾರೆ. ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನದ ಸಭಾಂಗಣದಲ್ಲಿ, ಸಹಜ ಸಮೃದ್ಧ ಆಯೋಜಿಸಿರುವ, ಮೂರು ದಿನಗಳ ಬಾಳೆ ಮೇಳವನ್ನು, ಉದ್ಘಾಟಿಸಿ ಅವರು ಮಾತನಾಡಿದರು.

<><><>

ಸುಸ್ಥಿರ ಅಭಿವೃದ್ಧಿ ತಜ್ಞ ಪ್ರಕಾಶ ಭಟ್ ಮಾತನಾಡಿ, ಮನೆಯಂಗಳದಲ್ಲಿ ಕೂಡ ಬಾಳೆ ಬೆಳೆಯಬಹುದು. ಎಲ್ಲರಿಗೂ ಪ್ರಿಯವಾದ ಬಾಳೆಹಣ್ಣನ್ನು ಕನ್ನಡ ಭಾ ಗೆ ಹೋಲಿಸಿದ ನಿದರ್ಶನ ನಮ್ಮ ಮುಂದಿದೆ ಎಂದರು.

<><><>

ಗುಂಡೇನಹಟ್ಟಿಯ ಸಾವಯವ ಕೃಷಿಕ ಶಂಕರ ಲಂಗಟಿ ಮಾತನಾಡಿ, ಬಾಳೆ ತಳಿ ಆಯ್ಕೆ ಮಾಡುವಾಗ, ಪೋ ಕಾಂಶ ಹಾಗೂ ಕೀಟ ಹಾಗೂ ರೋಗ ನಿರೋಧಕ ಶಕ್ತಿಯನ್ನು ಗಮನಿಸಿ, ದೇಸಿ ತಳಿಗಳನ್ನು ಆಯ್ದು ಕೊಳ್ಳಬೇಕು ಎಂದರು.

<><><>

ಬಾಳೆಯ ಸಂರಕ್ಷಕ, ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದ ಪ್ರಸಾದ ರಾಮ ಹೆಗಡೆ ಅವರು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಬಾಳೆ ಕೃಷಿಯ ಅನುಭವ ಹಂಚಿಕೊಂಡಿದ್ದಾರೆ.

<><><>

ಪ್ರಸಾದ ರಾಮ ಹೆಗಡೆ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಡಾಕ್ಟರ್ ಎಂ.ಎಂ. ಕಲಬುರಗಿಯವರು, ಅಂಬಲಿ ಮತ್ತು ಕಂಬಳಿಯನ್ನು ಮಾತ್ರ ತಮ್ಮ ಆಸ್ತಿಯನ್ನಾಗಿಸಿಕೊಂಡು, ಸತ್ಯದ ಸಂಶೋಧನೆಗೆ ಆದ್ಯತೆ ನೀಡಿದ್ದ ದಾರ್ಶನಿಕ ಎಂದು, ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ, ನಾಡೋಜ ಗೊ.ರು.ಚನ್ನಬಸಪ್ಪ ಹೇಳಿದ್ದಾರೆ. ಧಾರವಾಡದ ಡಾಕ್ಟರ್ ಎಂ.ಎಂ.ಕಲಬುರಗಿ ರಾಷ್ಟ್ರೀಯ ಪ್ರತಿಷ್ಠಾನ, ಧಾರವಾಡದ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಕಲಬುರಗಿ ಅವರ 86ನೇ ಜಯಂತಿ ಅಂಗವಾಗಿ, ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಹಾಗೂ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ, ಆಯೋಜಿಸಿತ್ತು.

ಮೈಸೂರಿನ ಹಿರಿಯ ಸಂಶೋಧಕ ಎನ್.ಎಸ್.ತಾರಾನಾಥ ಅವರಿಗೆ, 'ಎಂ.ಎಂ. ಕಲಬುರ್ಗಿ ಸಂಶೋಧನ ಪ್ರಶಸ್ತಿ' ಹಾಗೂ ಧಾರವಾಡದ ಸಂಗೀತಗಾರ ಶರಣಬಸಪ್ಪ ಮೇಡೆದಾರ ಅವರಿಗೆ, 'ಎಂ.ಎಂ.ಕಲಬುರ್ಗಿ ವಚನ ಸಂಗೀತ ಪ್ರಶಸ್ತಿ' ಪ್ರದಾನ ಮಾಡಿ, ಜಿ.ಎಂ. ಹೆಗಡೆ ಸಂಪಾದಿತ, ಕನ್ನಡ ಸಂಶೋಧನ ಮಾರ್ಗ, ಸಂಪುಟ –1 ಬಿಡುಗಡೆ ಮಾಡಿ, ಗೊ.ರು.ಚ. ಮಾತನಾಡಿದರು.

<><><>

ನಾಡೋಜ ಗೊ.ರು. ಚನ್ನಬಸಪ್ಪ ಧ್ವನಿ 50 ಸೆಕೆಂದುಗಳು

<><><>

ಸರ್ಕಾರದ ಮಹತ್ವದ ಹಲವು ಜನಪರ ಯೋಜನೆಗಳನ್ನು, ಗ್ರಾಮ ಪಂಚಾಯಿತಿ ಹಂತದಲ್ಲಿ ಅನುಷ್ಠಾನಗೊಳಿಸಲು, ಸ್ಥಳೀಯ ಆಡಳಿತ, ಜನತೆ ಮತ್ತು ಸ್ವಯಂಸೇವಾ ಸಂಸ್ಥೆಗಳ ಸಹಕಾರ ಮಹತ್ವದ್ದು ಎಂದು, ಧಾರವಾಡ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಸ್ವರೂಪಾ ಟಿ.ಕೆ. ಹೇಳಿದ್ದಾರೆ. ಉನ್ನತ ಭಾರತ ಅಭಿಯಾನದಡಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ, ಪ್ರಾದೇಶಿಕ ಕೇಂದ್ರ, ಧಾರವಾಡ, ಗದಗ, ದಾವಣಗೆರೆ ಹಾಗೂ ಹಾವೇರಿ ಜಿಲ್ಲೆಗಳ, ಇಂಜಿನಿಯರಿಂಗ್ ಹಾಗೂ ಪದವಿ ಕಾಲೇಜುಗಳ ಅಧ್ಯಾಪಕರಿಗೆ ಏರ್ಪಡಿಸಿದ್ದ, ಕಾರ್ಯಾಗಾರದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಸಮರ್ಪಕ ಮತ್ತು ಕಾಲಮಿತಿಯಲ್ಲಿ ಯೋಜನೆಗಳ ಅನುಷ್ಠಾನ, ಅರ್ಹ ಫಲಾನುಭವಿಗಳನ್ನು ಸಕಾಲದಲ್ಲಿ ಯೋಜನೆಗಳು ತಲುಪಲು, ಸಂಘಟಿತ ಪ್ರಯತ್ನ ಅವಶ್ಯ ಎಂದರು.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, 'ಧರೆಗೆ ದೊಡ್ಡವರು' ಕಾರ್ಯಕ್ರಮದಡಿ, ಇಂದು ಬೆಳಗ್ಗೆ 10.30ಕ್ಕೆ, ಬೆಂಗಳೂರಿನ ಹಿರಿಯ ಚಿಂತಕ ಜಿ. ರಾಮಕೃಷ್ಣ ಅವರ ಬದುಕು ಮತ್ತು ಕೊಡುಗೆ ಕುರಿತು, ವಿಚಾರ ಸಂಕಿರಣ ಜರುಗಲಿದೆ. ಬೆಂಗಳೂರಿನ ಎನ್. ಗಾಯತ್ರಿ ಹಾಗೂ ಧಾರವಾಡದ ಸಿದ್ಧನಗೌಡ ಪಾಟೀಲ ವಿಶೇಷ ಉಪನ್ಯಾಸ ನೀಡಲಿದ್ದಾರೆ.

<><><>

ಧಾರವಾಡದ ಶ್ರೀ ಧರ್ಮಸ್ಥಳ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಮಾರೋಪಗೊಂಡ, ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾಲಯಗಳ, ಮಹಿಳಾ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ, ಚೆನ್ನೈನ ಎಸ್.ಆರ್.ಎಂ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ತಂಡ, ಚಾಂಪಿಯನ್ಶಿಪ್ ಪಟ್ಟವನ್ನು ಅಲಂಕರಿಸಿತು. ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದ ತಂಡ, 'ರನ್ನರ್ ಅಪ್', ಕರ್ನೂಲ್‌ನ ರಾಯಲ್‌ಸೀಮಾ ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ರೇವಾ ವಿಶ್ವವಿದ್ಯಾಲಯದ ತಂಡಗಳು, ಕ್ರಮವಾಗಿ 3 ಮತ್ತು 4ನೇ ಸ್ಥಾನಗಳನ್ನು ಪಡೆದುಕೊಂಡವು. 75 ವಿಶ್ವವಿದ್ಯಾಲಯಗಳಿಂದ, ಮಹಿಳಾ ಬ್ಯಾಡ್ಮಿಂಟನ್ ಪಟುಗಳು ಭಾಗವಹಿಸಿದ್ದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ರಾಜ್ಯ ಮಾನವ ಹಕ್ಕುಗಳ ಆಯೋಗ, ಇಂದು ಕೋಲಾರದಲ್ಲಿ ಆಯೋಜಿಸಿದ್ದ, ಅಹವಾಲು ಆಲಿಕೆ ಸಭೆಯನ್ನು ಮುಂದೂಡಿದೆ.

<><><>

ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ, ಬಾಲ ಭವನದಲ್ಲಿ, ಮಕ್ಕಳ ರಕ್ಷಣಾ ನಿರ್ದೇಶನಾಲ, ದತ್ತು ಮಾಸಾಚರಣೆ ಅಂಗವಾಗಿ, ದತ್ತು ಪಡೆದ ಪೋಷಕರ ಸಮಾವೇಶವನ್ನು ನಾಳೆ ಬೆಳಿಗ್ಗೆ 10.30ಕ್ಕೆ ಆಯೋಜಿಸಿದೆ.

<><><>

ಧಾರವಾಡ ಜಿಲ್ಲಾ ಟೆನಿಸ್ ಸಂಸ್ಥೆ, 10 ಮತ್ತು 12 ವರ್ಷದೊಳಗಿನ ಬಾಲಕ, ಬಾಲಕಿಯರಿಗಾಗಿ, ರಾಜ್ಯ ರ್‍ಯಾಂಕಿಂಗ್ ಟೆನಿಸ್ ಪಂದ್ಯಾವಳಿಯನ್ನು, ಧಾರವಾಡದ ರಾಜ್ಯಾಧ್ಯಕ್ಷ ಪೆವಿಲಿಯನ್ ಆವರಣದಲ್ಲಿ, ನಾಳೆ 30 ಹಾಗೂ ಡಿಸೆಂಬರ್ 1 ರಂದು ಆಯೋಜಿಸಿದೆ.

<><><>

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆ, ಮಂಡ್ಯದ ಕಾವೇರಿ ಸಭಾಂಗಣದಲ್ಲಿ, ಸಂಘ, ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ, ಜಿಲ್ಲಾಧಿಕಾರಿ ಕುಮಾರ ಸಭೆ ನಡೆಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಬೆಳಗಾವಿ, ವಿಧಾನ ಮಂಡಲ ಚಳಿಗಾಲದ ಅಧಿವೇಶನ, ಡಿಸೆಂಬರ್ 19ಕ್ಕೆ, ಅನಿರ್ದಿಷ್ಟಾವಧಿ ಮುಂದೂಡಿಕೆ – ಯು.ಟಿ. ಖಾದರ್.
- ರಾಷ್ಟ್ರದಲ್ಲೇ ಮೊದಲ, ಕೊಯ್ಲೋತ್ತರ 'ಸೆಕೆಂಡರಿ ಕೃಷಿ ನಿರ್ದೇಶನಾಲಯ' ರಾಜ್ಯದಲ್ಲಿ ಕಾರ್ಯಾರಂಭ – ಎಸ್.ವಿ. ಸುರೇಶ.
- ಸತ್ಯದ ಸಂಶೋಧನೆಗೆ ಆದ್ಯತೆ ನೀಡಿದ್ದ ದಾರ್ಶನಿಕ, ಎಂ.ಎಂ. ಕಲಬುರಗಿ –ನಾಡೋಜ, ಗೊ.ರು.ಚನ್ನಬಸಪ್ಪ.

- ಅಂತರ್ ವಿಶ್ವವಿದ್ಯಾಲಯಗಳ, ಮಹಿಳಾ ಬ್ಯಾಡ್ಮಿಂಟನ್ ಪಂದ್ಯಾವಳಿ; ಎಸ್.ಆರ್.ಎಂ. ಇನ್ಸ್ಟಿಟ್ಯೂಟ್, ಚೆನ್ನೈ ತಂಡ, ವೀರಾಗ್ರಣಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ